# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/39/2016-17 ದಿನಾಂಕ :30/08/ 2016

ಉಪಸ್ಥಿತರು: **ಶ್ರೀಲೋಕೇಶ್.ಪಿ.ಎನ್.** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀಮತಿ ಲಕ್ಷ್ಮಮ್ಮ, ಗಂಡ ಲೇಟ್ ಕೆ.ಈರಣ್ಣ ಕುಡುದುರಾಳ ಗ್ರಾಮ, ಸಿರುಗುಪ್ಪ ತಾಲೂಕು<br><br>(ಶ್ರೀಕೆ.ವಿನಯ ಕುಮಾರ,ವಕೀಲರು,ಬಳ್ಳಾರಿ) | 1.ತಹಶೀಲ್ದಾರರು, ಸಿರುಗುಪ್ಪ<br>2.ಕಂದಾಯ ನಿರೀಕ್ಷಕರು,ಹಚ್ಚೊಳ್ಳಿ<br>3.ಗ್ರಾಮಲೆಕ್ಕಾಧಿಕಾರಿ,ಕೊತ್ತಲಚಿಂತ<br>4.ಶ್ರೀ.ಬಿ.ಗುರುನಾಥ ತಂದೆ ಬಾರಿಕರ ನರಸಪ್ಪ ಕೊತ್ತಲಚಿಂತ ಗ್ರಾಮ,ಸಿರುಗುಪ್ಪ ತಾಲೂಕು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಿರುಗುಪ್ಪ | ಕೊತ್ತಲಚಿಂತ | 111/ಎ/1 | 6.26 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು,ಹಚ್ಚೊಳ್ಳಿ ಇವರ ಎಂ.ಆರ್.ನಂ.H35/2013-14 ದಿನಾಂಕ:25.07.2014 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 12.07.2016,30.08.2016,ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿ ಸಿರುಗುಪ್ಪ ತಾಲೂಕು ಕೊತ್ತಲಚಿಂತ ಗ್ರಾಮದ ಸ.ನಂ.111/ಎ/1 ವಿಸ್ತೀರ್ಣ:6.26 ಎಕರೆ ಜಮೀನನ್ನು ನೊಂದಾಯಿತ ಕ್ರಯ ಪತ್ರ ಸಂಖ್ಯೆ 224/1977-78 ದಿನಾಂಕ:02.05.1977 ರಂದು ಮನವಿದಾರರು ಕ್ರಯಕ್ಕೆ ಪಡೆದಿರುತ್ತಾರೆ. ಕ್ರಯ ಪತ್ರದಂತೆ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಲಾಗಿ ಕಂದಾಯ ನಿರೀಕ್ಷಕರು,ಹಚ್ಚೊಳ್ಳಿ ಇವರ ಎಂ.ಆರ್.ನಂ.H35/2013-14 ದಿನಾಂಕ:25.07.2014 ರ ಆದೇಶದಲ್ಲಿ ನಿಗದಿತ ಅವಧಿತಯೊಳಗೆ ನಮೂನೆ 21 ನೋಟೀಸ್ ಜಾರಿ ಮಾಡಲಾಗಿ ಯಾರಿಂದಲೂ ಆಕ್ಷೇಪಣೆಗಳು ಬಂದಿರುವುದಿಲ್ಲ ಹಾಗೂ ನ್ಯಾಯಾಲಯದಿಂದ ತಡೆಯಾಜ್ಞೆ ಬಂದಿರುವುದಿಲ್ಲದಿರುವುದರಿಂದ ಮ್ಯುಟೇಶನ್ ಅಂಗೀಕರಿಸಿದ. ಆದೇಶವನ್ನು ಪ್ರಶ್ನಿಸುತ್ತಾ, ಸದರಿ ಮಂಜೂರು ಆದೇಶವನ್ನು ರದ್ದು ಪಡಿಸಿ,ಕ್ರಯ ಪತ್ರದಂತೆ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಾದಿಗಳು ಈ ನ್ಯಾಯಾಲಯಕ್ಕೆ ಸಲ್ಲಿಸಿದ ಮೇಲ್ಮನವಿ ಪರಿಶೀಲಿಸಲಾಗಿ ವಾದಿಗಳು ಹಾಗೂ ಪ್ರತಿವಾದಿಗಳು ನ್ಯಾಯಾಲಯದ ಹೊರಗೆ ಇತ್ಯರ್ಥ ಪಡಿಸಿಕೊಂಡಿರುವುದಾಗಿ ರಾಜಿ ಪತ್ರವನ್ನು ಈ ನ್ಯಾಯಾಲಯಕ್ಕೆ ಹಾಜರು

ಪಡಿಸಿದ್ದು,ರಾಜಿ ಪತ್ರದಂತೆ ಎಂ.ನಂ.H35/2013-14 ದಿನಾಂಕ:25.07.2014 ಆದೇಶವನ್ನು ರದ್ದುಗೊಳಿಸಿ, ಕ್ರಯ ಪತ್ರದಂತೆ ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡವ ಈ ಕೆಳಕಂಡಂತೆ ಆದೇಶ.

**:: ಆದೇಶ ::**

**ವಾದಿಯ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದೆ:-**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸಿರುಗುಪ್ಪ ತಾಲ್ಲೂಕಿನ ಕೊತ್ತಲಚಿಂತ ಗ್ರಾಮದ 111/ಎ/1 ವಿಸ್ತೀರ್ಣ: 6.26 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರ ಎಂ.ನಂ. H35/2013-14 ದಿನಾಂಕ:25.07.2014 ರ ಆದೇಶವನ್ನು ರದ್ದುಗೊಳಿಸಿದೆ, ಕ್ರಯಪತ್ರದಂತೆ ನಿಯಮಾನುಸಾರ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು,ಸಿರುಗುಪ್ಪ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ ತಪ್ಪುಗಳನ್ನು ತಿದ್ದಿ **ದಿನಾಂಕ: 30.08.2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಸಹಾಯಕ ಆಯುಕ್ತರು,
ಬಳ್ಳಾರಿ.